# ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ

**ನಂ.113, ಆರ್.ವಿ. ರಸ್ತೆ, ವಿ.ವಿ.ಪುರಂ, ಬೆಂಗಳೂರು – 560004. ☎: 26601152/153**

E-mail-sssbn@sreenidhibank.com Web : www.sreenidhibank.com


SSSBN/APT/414/2023-24 ದಿನಾಂಕ: 01/07/2023

## ಅಧಿಸೂಚನೆ

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಗೆ ನಮೂದಿಸಿರುವ ಹುದ್ದೆಗಳ ನೇಮಕಾತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ, ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತದ ಉಪವಿಧಿ ಹಾಗೂ ಸಿಬ್ಬಂದಿ ನೇಮಕಾತಿ ಮತ್ತು ಸೇವಾ ನಿಯಮ ಹಾಗೂ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ. ಸಂ. | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 1. | a) ಶಾಖಾ ವ್ಯವಸ್ಥಾಪಕರು/ಉಪ ವ್ಯವಸ್ಥಾಪಕರು/ಲೆಕ್ಕಾಧಿಕಾರಿ | 3 | Banking/ Accountancy/ Economics/ Maths/ Statistics/ Business Administration ಯಾವುದಾದರು ಒಂದು ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪ್ರಥಮ ದರ್ಜೆಯ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. ಕನಿಷ್ಠ 3 ವರ್ಷ ಬ್ಯಾಂಕಿನ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. |
| | b) ಕಂಪ್ಯೂಟರ್ ಪ್ರೋಗ್ರಾಮರ್ ಹಾಗೂ ಡಿ.ಬಿ.ಎ | 1 | BCA/ B.Tech (Computers) ಯಾವುದಾದರು ಒಂದು ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪ್ರಥಮ ದರ್ಜೆಯ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. ಕನಿಷ್ಠ 3 ವರ್ಷ ಬ್ಯಾಂಕಿನ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. |
| 2. | ಸಹಾಯಕ ವ್ಯವಸ್ಥಾಪಕರು/ ಸಹಾಯಕ ಲೆಕ್ಕಾಧಿಕಾರಿಗಳು/ ಕ್ಷೇತ್ರಾಧಿಕಾರಿಗಳು/ ವಸೂಲಾಧಿಕಾರಿಗಳು/ ಸಹಾಯಕ ಡಿ.ಬಿ.ಎ | 5 | Banking/Accountancy/ Economics/ Maths/ Statistics/ Business Administration/ BCA/ B.Tech (Computers) ಯಾವುದಾದರು ಒಂದು ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ದ್ವಿತೀಯ ದರ್ಜೆಯ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. ಕನಿಷ್ಠ 3 ವರ್ಷ ಬ್ಯಾಂಕಿನ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. |
| 3. | ಹಿರಿಯ ಸಹಾಯಕರು/ ಹಿರಿಯ ದತ್ತಾಂಶ ನಮೂದು ಆಯೋಜಕರು | 2 | Banking/ Accountancy/ Economics/ Maths/ Statistics/ Business Administration ಯಾವುದಾದರು ಒಂದು ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ದ್ವಿತೀಯ ದರ್ಜೆಯ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. |
| 4. | ಕಿರಿಯ ಸಹಾಯಕರು/ ಗುಮಾಸ್ತ/ ಬೆರಳಚ್ಚುಗಾರ/ ದತ್ತಾಂಶ ನಮೂದು ಆಯೋಜಕರು | 6 | ಯಾವುದಾದರೂ ಒಂದು ವಿಷಯದಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. |
| 5. | ಸೇವಕರು/ ಜವಾನರು/ ಭದ್ರತಾ ರಕ್ಷಕರು/ ವಾಹನ ಚಾಲಕರು | 1 | ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು, ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನ ಚಾಲನಾ ಪರವಾನಗಿಯೊಂದಿಗೆ ಅನುಭವ ಹೊಂದಿರಬೇಕು. |

**ವಿಶೇಷ ಗಮನಕ್ಕಾಗಿ:** ಎಲ್ಲಾ ಹುದ್ದೆಗಳಿಗೂ ಕನ್ನಡ ಭಾಷೆಯನ್ನು ಓದಲು, ಬರೆಯಲು, ಅರ್ಥೈಸಿಕೊಳ್ಳಲು ಮತ್ತು ಮಾತನಾಡಲು ಸಾಮರ್ಥ್ಯವಿರುವಷ್ಟು ಪರಿಜ್ಞಾನ ಹೊಂದಿರಬೇಕು.

1. **ಅರ್ಜಿ ಸಲ್ಲಿಸುವ ವಿಧಾನ:** ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ ವೆಬ್‌ಸೈಟ್ (www.sreenidhibank.com) ನಿಂದ ಡೌನ್‌ಲೋಡ್ ಮಾಡಿಕೊಂಡು, ಲಿಖಿತ/ಮುದ್ರಿತ ರೂಪದಲ್ಲಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಅರ್ಜಿ ಶುಲ್ಕದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸಿ **'ವ್ಯವಸ್ಥಾಪಕ ನಿರ್ದೇಶಕರು, ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, ಆಡಳಿತ ಕಛೇರಿ, ನಂ.113, ಆರ್.ವಿ.ರಸ್ತೆ, ವಿ.ವಿ.ಪುರಂ, ಬೆಂಗಳೂರು–560004"** ಈ ವಿಳಾಸಕ್ಕೆ ಅಂಚೆ/ಕೋರಿಯರ್ ಅಥವಾ ಖುದ್ದಾಗಿ ತಲುಪಿಸತಕ್ಕದ್ದು. ಅರ್ಜಿ, ಡಿ.ಡಿ ಮತ್ತು ಇತರ ದಾಖಲಾತಿಗಳನ್ನೊಳಗೊಂಡ ಸೀಲ್‌ಮಾಡಿದ ಲಕೋಟೆಯ ಮೇಲೆ **"ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ ನೇಮಕಾತಿ–2023"** ಎಂದು ನಮೂದಿಸಬೇಕು.

2. **ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು :**
   1. ಸೂಕ್ತವಾಗಿ ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಿದ ಹಾಗೂ ಅಭ್ಯರ್ಥಿಯ ಸಹಿಯನ್ನು ಹೊಂದಿರುವ ಅರ್ಜಿ.
   2. ಹುದ್ದೆಗೆ ನಿಗದಿಪಡಿಸಿದ ಅರ್ಜಿ ಶುಲ್ಕದ ಡಿಮ್ಯಾಂಡ್ ಡ್ರಾಫ್ಟ್.
   3. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ರುಜುವಾತುಪಡಿಸುವ ದಾಖಲಾತಿಗಳು ಸ್ವಯಂ ದೃಢೀಕೃತ ಪ್ರತಿಗಳು. (ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು)
   4. ಈಗಾಗಲೇ ಸೇವೆಯಲ್ಲಿದ್ದಲ್ಲಿ, ತಾವು ಸೇವೆ ಸಲ್ಲಿಸುತ್ತಿರುವ ಪ್ರಾಧಿಕಾರ/ಸಂಸ್ಥೆಯಿಂದ ಅರ್ಜಿ ಸಲ್ಲಿಕೆಗೆ ಅನುಮತಿ ಪತ್ರ. (ಮಾದರಿ ನೀಡಲಾಗಿದೆ)
   5. ಕಂಪ್ಯೂಟರ್ ಜ್ಞಾನವನ್ನು ಹೊಂದಿರುವ ಕುರಿತು ಸ್ವಯಂ ದೃಢೀಕರಿಸಿದ ದಾಖಲಾತಿ.

3. **ಅರ್ಜಿ ಸಲ್ಲಿಕೆಯ ಅವಧಿ:**
   1. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ 02/07/2023 (ಬೆಳಿಗ್ಗೆ 9.30 ರಿಂದ)
   2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 17/07/2023 (ಸಂಜೆ 5.00 ಗಂಟೆಯೊಳಗೆ)

4. **ಇತರೆ ಸೂಚನೆಗಳು:**
   1. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತಿಯೊಂದು ಹುದ್ದೆಗಳಿಗೆ ಪ್ರತ್ಯೇಕ ಅರ್ಜಿ ಹಾಗೂ ಶುಲ್ಕವನ್ನು ಪಾವತಿಸಬೇಕು.
   2. ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿದ ಇ–ಮೇಲ್ (e-mail) ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಸೇರಿದಂತೆ ನೇಮಕಾತಿ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಸಂಪರ್ಕಿಸುವುದಕ್ಕಾಗಿ ಬಳಸಲಾಗುವುದು.
   3. ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯವೇ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ಅಪೂರ್ಣವಾದ ಅಥವಾ ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿರುವುದು ಕಂಡುಬಂದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

5. **ವಯೋಮಿತಿ:** ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 35 ವರ್ಷಗಳು ಇರತಕ್ಕದ್ದು.

6. **ಅರ್ಜಿ ಶುಲ್ಕ:**
   - ಕ್ರಮ ಸಂಖ್ಯೆ 1 ರಿಂದ 4 ರ ವರೆಗಿನ ಹುದ್ದೆಗಳಿಗೆ = ರೂ.354/– (ಅರ್ಜಿಶುಲ್ಕ ರೂ.300+ಜಿ.ಎಸ್.ಟಿ ರೂ.54)
   - ಕ್ರಮ ಸಂಖ್ಯೆ 5 ರ ಹುದ್ದೆಗೆ = ರೂ.177/– (ಅರ್ಜಿಶುಲ್ಕ ರೂ.150+ಜಿ.ಎಸ್.ಟಿ ರೂ.27)

**7. ಅರ್ಜಿ ಶುಲ್ಕ ಪಾವತಿ ವಿಧಾನ:**

- ತಾವು ಸಲ್ಲಿಸುತ್ತಿರುವ ಹುದ್ದೆಗೆ ಸಂಬಂಧಿಸಿದ ಅರ್ಜಿ ಶುಲ್ಕವನ್ನು **'ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ'** ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ತೆಗೆಯಬೇಕು.
- ಡಿ.ಡಿ.ಯ ಹಿಂಭಾಗದಲ್ಲಿ ಹೆಸರು, ಅರ್ಜಿ ಸಲ್ಲಿಸಿರುವ ಹುದ್ದೆ, ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ.
- ಆಯಾ ಹುದ್ದೆಗೆ ನಿಗದಿಪಡಿಸಿದ ಮೊತ್ತದ ಡಿ.ಡಿ. ಯನ್ನು ಲಗತ್ತಿಸಿಲ್ಲದ ಅರ್ಜಿಯನ್ನು ಅಥವಾ ನಿಗದಿತ ಸಮಯದ ನಂತರ ತಲುಪಿದ ಅರ್ಜಿಯನ್ನು ಅಥವಾ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಅರ್ಜಿ ಶುಲ್ಕವನ್ನು ಡಿ.ಡಿ. ರೂಪದಲ್ಲಿ ಮಾತ್ರ ಸ್ವೀಕರಿಸಲಾಗುವುದು. ಎಲ್ಲಾ ಶಾಖೆಗಳಲ್ಲಿ ನಗದೀಕರಣಗೊಳ್ಳಬಹುದಾದ ಚೆಕ್ (At Par Cheque) ಗಳನ್ನು ಪರಿಗಣಿಸುವುದಿಲ್ಲ.

**8. ಆಯ್ಕೆ ವಿಧಾನ:**

- ಆಯ್ಕೆಯನ್ನು ಬ್ಯಾಂಕಿನ ಸಿಬ್ಬಂದಿ ನೇಮಕಾತಿ ಮತ್ತು ಸೇವಾ ನಿಯಮಾವಳಿಯಂತೆ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಮಾಡಲಾಗುತ್ತದೆ.
- ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಹುದ್ದೆಗಳಿಗನುಸಾರವಾಗಿ 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು.

**9. ಲಿಖಿತ ಪರೀಕ್ಷೆ ಪಠ್ಯಕ್ರಮ:**

ಲಿಖಿತ ಪರೀಕ್ಷೆಯು ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತದೆ. ಇವು ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆಗಳಾಗಿದ್ದು ಒಟ್ಟು 200 ಅಂಕಗಳನ್ನು ಒಳಗೊಂಡಿರುತ್ತದೆ. (ಪ್ರಶ್ನೆ ಪತ್ರಿಕೆ ಆಂಗ್ಲ ಭಾಷೆಯಲ್ಲಿರುತ್ತದೆ.)

**Paper-I**

1. Test of Numerical Ability - 50 Marks
2. Test of English Language - 40 Marks
3. Test of English/Kannada Language -10 Marks

**Paper-II**

4. Test of Reasoning Ability – 50 Marks
5. General Knowledge and Current Affairs (GK) -50 Marks

**ಗಮನಿಸಿ:** ಲಿಖಿತ ಪರೀಕ್ಷೆ/ಸಂದರ್ಶನ/ಕೌಶಲ್ಯ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.

**10. ಶೈಕ್ಷಣಿಕ ವಿದ್ಯಾರ್ಹತೆ:**

- ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಬಂಧಿಸಿದ ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಹುದ್ದೆಗಳಿಗೆ ಅಗತ್ಯವಿರುವ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್/ವರ್ಷಗಳಲ್ಲಿ ಎಲ್ಲಾ ವಿಷಯಗಳಿಗೆ (ಭಾಷೆಗಳು ಒಳಗೊಂಡಂತೆ) ನಿಗದಿಪಡಿಸಿರುವ ಗರಿಷ್ಠ ಅಂಕಗಳು ಮತ್ತು ಪಡೆದಿರುವ ಅಂಕಗಳನ್ನು ಪರಿಗಣಿಸಿ ಶೇಕಡವಾರು ಸರಾಸರಿ ಅಂಕವನ್ನು ಸ್ಪಷ್ಟವಾಗಿ ನಮೂದಿಸುವುದು.
- ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು, ಅವರ ಗ್ರೇಡ್ ಅಂಕಗಳನ್ನು ಶೇಕಡಾವಾರು ಅಂಕಗಳಿಗೆ ಪರಿವರ್ತಿಸಿ ವಿಶ್ವ ವಿದ್ಯಾಲಯ ನೀಡಿರುವ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಶೇಕಡಾವಾರು ಅಂಕಗಳನ್ನು ತಪ್ಪದೆ ನಮೂದಿಸಬೇಕು.

**11. ಸಾಮಾನ್ಯ ಸೇವಾ ಷರತ್ತುಗಳು:**

- ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತದ ಸೇವೆಗೆ ಆಯ್ಕೆಯಾದ ಅಭ್ಯರ್ಥಿಯು ಒಂದು ವರ್ಷಗಳ ಕಾಲ ಪರೀಕ್ಷಾರ್ಥ ಸೇವಾ ಅವಧಿಯನ್ನು ಹೊಂದಿರುತ್ತಾರೆ.
- ತೃಪ್ತಿದಾಯಕ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಯ ಸೇವೆಯನ್ನು ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತದ ಆಡಳಿತ ಮಂಡಳಿಯ ನಿರ್ಣಯಕ್ಕೆ ಒಳಪಟ್ಟು ಖಾಯಂ ಗೊಳಿಸಲಾಗುತ್ತದೆ.
- ಆಯ್ಕೆಯಾದ ಆಯಾ ಹುದ್ದೆಗಳಿಗನುಸಾರವಾಗಿ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ನೀಡಲಾಗುತ್ತದೆ.

| ಕ್ರ ಸಂ. | ಪದನಾಮ | ವೇತನ ಶ್ರೇಣಿ |
|---|---|---|
| 1. | a) ಶಾಖಾ ವ್ಯವಸ್ಥಾಪಕರು/ ಉಪ ವ್ಯವಸ್ಥಾಪಕರು/ ಲೆಕ್ಕಾಧಿಕಾರಿ & b) ಕಂಪ್ಯೂಟರ್ ಪ್ರೋಗ್ರಾಮರ್ ಹಾಗೂ ಡಿ.ಬಿ.ಎ | 43100–1100–46400–1250–53900–1450–62600–1650–72500–1900–83900 |
| 2. | ಸಹಾಯಕ ವ್ಯವಸ್ಥಾಪಕರು/ ಸಹಾಯಕ ಲೆಕ್ಕಾಧಿಕಾರಿಗಳು/ ಕ್ಷೇತ್ರಾಧಿಕಾರಿಗಳು/ ವಸೂಲಾಧಿಕಾರಿಗಳು/ ಸಹಾಯಕ ಡಿ.ಬಿ.ಎ | 37900–950–39800–1100–46400–1250–53900–1450–62600–1650–70850 |
| 3. | ಹಿರಿಯ ಸಹಾಯಕರು/ ಹಿರಿಯ ದತ್ತಾಂಶ ನಮೂದು ಆಯೋಜಕರು | 33450–850–36000–950–39800–1100–46400–1250–53900–1450–62600 |
| 4. | ಕಿರಿಯ ಸಹಾಯಕರು/ ಗುಮಾಸ್ತ/ ಬೆರಳಚ್ಚುಗಾರ/ ದತ್ತಾಂಶ ನಮೂದು ಆಯೋಜಕರು | 30350–750–32600–850–36000–950–39800–1100–46400–1250–53900–1450–58250 |
| 5. | ಸೇವಕರು/ ಜವಾನರು/ ಭದ್ರತಾ ರಕ್ಷಕರು/ ವಾಹನ ಚಾಲಕರು | 21400–500–22400–550–24600–600–27000–650–29600–750–32600–850–36000–950–39800–1100–42000 |

- ಸೇವೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತು ನಗರ ಪರಿಹಾರ ಭತ್ಯೆಗಳು ಆಡಳಿತ ಮಂಡಳಿಯು ಕಾಲ ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಇರುತ್ತವೆ.
- ವಿದ್ಯಾರ್ಹತೆ ಹಾಗೂ ಅನುಭವಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
- ಕ್ರಮ ಸಂಖ್ಯೆ 1 ಮತ್ತು 2 ರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿಗೆ ರೂ.1,25,000/–ಗಳ ನಗದು ಠೇವಣಿ ಮತ್ತು ರೂ.1,00,000/–ಗಳ ಮೌಲ್ಯದ ನಂಬಿಕೆ ಖಾತರಿ ಪತ್ರ, ಕ್ರಮ ಸಂಖ್ಯೆ 3 ಮತ್ತು 4 ರ ಹುದ್ದೆಗಳಿಗೆ ರೂ.75,000/–ಗಳ ನಗದು ಠೇವಣಿ ಮತ್ತು ರೂ.50,000/–ಗಳ ಮೌಲ್ಯದ ನಂಬಿಕೆ ಖಾತರಿ ಪತ್ರ ಹಾಗೂ ಕ್ರಮ ಸಂಖ್ಯೆ 5 ರ ಹುದ್ದೆಗೆ ರೂ.30,000/–ಗಳ ನಗದು ಠೇವಣಿ ಮತ್ತು ರೂ.50,000/–ಗಳ ಮೌಲ್ಯದ ನಂಬಿಕೆ ಖಾತರಿ ಪತ್ರ ನೀಡಬೇಕು.
- ನಿಗದಿಪಡಿಸಿರುವ ಹುದ್ದೆಗಳ ಸಂಖ್ಯೆಯನ್ನು ಮುನ್ಸೂಚನಾರಹಿತವಾಗಿ ಮರುನಿಗದಿಗೊಳಿಸುವ ಅಧಿಕಾರ ಬ್ಯಾಂಕಿನ ಆಡಳಿತ ಮಂಡಳಿಗಿರುತ್ತದೆ.
- ಬ್ಯಾಂಕಿನ ಆಡಳಿತ ಮಂಡಳಿಯು ಯಾವುದೇ ಅರ್ಜಿಯನ್ನು ಕಾರಣವನ್ನು ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ.
- ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತಾರೆ ಹಾಗೂ ಯಾವುದೇ ಹುದ್ದೆಗೆ ಸಂಬಂಧಿಸಿದಂತೆ ಪ್ರತ್ಯೇಕ ಸೇವಾ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ಬ್ಯಾಂಕು ಹೊಂದಿರುತ್ತದೆ.
- ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿಯೂ ಯಾವುದೇ ಕಾರಣವನ್ನು ನೀಡದೆ ರದ್ದುಗೊಳಿಸುವ ಅಧಿಕಾರ ಬ್ಯಾಂಕಿನ ಆಡಳಿತ ಮಂಡಳಿಗಿರುತ್ತದೆ.

**12. ಸಾಮಾನ್ಯ ಅರ್ಹತಾ ಷರತ್ತುಗಳು :–**

1. ಭಾರತೀಯ ನಾಗರೀಕರಾಗಿರತಕ್ಕದ್ದು.
2. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕದಂತೆ ಕನಿಷ್ಠ 18 ವರ್ಷ ವಯಸ್ಸಿನವರಾಗಿರತಕ್ಕದ್ದು.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರತಕ್ಕದ್ದು ಮತ್ತು ಅವರ ನೇಮಕಾತಿಯ ಹುದ್ದೆಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರತಕ್ಕದ್ದು.
4. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಅರ್ಹತೆಯನ್ನು ಹೊಂದಿರುತ್ತಾರೆ.

**13. ದುರ್ನಡತೆ :**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವರೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವರೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವರೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವರೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ/ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವರೆಂದು ಕಂಡುಬಂದಲ್ಲಿ ಅಂತಹವರು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ

---

**ಪ್ರಸ್ತುತವಾಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆಯಬೇಕಾದ ನಿರಾಪೇಕ್ಷಣಾ/ಅನುಮತಿ ಪತ್ರದ ನಮೂನೆ**

ನಿರಾಪೇಕ್ಷಣಾ/ಅನುಮತಿ ಪತ್ರದ ನಮೂನೆ ಸಂಖ್ಯೆ: ದಿನಾಂಕ:

ಶ್ರೀ/ಶ್ರೀಮತಿ............................................................ ತಂದೆಯ ಹೆಸರು..................................................... ಇವರು ............................ದಿನಾಂಕದಿಂದ ........................... ದಿನಾಂಕದವರೆಗೆ............................................................. ಸಂಸ್ಥೆಯಲ್ಲಿ ................................ ಹುದ್ದೆಯಲ್ಲಿ ಖಾಯಂ/ ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ ಇದರ ನೇಮಕಾತಿ ಅಧಿಸೂಚನೆಯಂತೆ ಆಹ್ವಾನಿಸಿರುವ .................................................................. ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ/ಇಲಾಖೆಯಿಂದ ಯವುದೇ ಆಕ್ಷೇಪಣೆ ಇರುವುದಿಲ್ಲ.

ಪ್ರಾಧಿಕಾರಿಗಳ ಪದನಾಮ, ಸಹಿ ಮತ್ತು ಮೊಹರು